# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಮಾರ್ಚ್ 2020**, ಬೆಂಗಳೂರು, ಸಂಪುಟ 5, ಸಂಚಿಕೆ 11, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 March 2020**, Bangaluru, Vol. 5, No.11, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.


**ಧಮ್ಮ ಪದಗಳು**

ಮಹಾ ಕಾರುಣಿಕೊ ನಾಥೊ, ಹಿತಾಯ
ಸಬ್ಬಾ ಪಾಣಿನಾಮ್, ಪೂರೇತ್ವಾ ಪಾಯೇಮಿ
ಸಬ್ಬಾ, ಪತ್ತೋ ಸಂಬೋಧಿಮುತ್ತಮಮ್

ಅನಂತ ಕರುಣಾಮಯಿಯಾದವರು ಎಲ್ಲಾ ಜೀವಿಗಳ ಕಲ್ಯಾಣಕ್ಕಾಗಿ ಮತ್ತು ಸಂತೋಷಕ್ಕಾಗಿ ಎಲ್ಲಾ ಪಾರಮಿಗಳನ್ನು ಪೂರ್ಣಗೊಳಿಸಿಕೊಂಡು ಅತ್ಯುನ್ನತ ಜ್ಞಾನವನ್ನು ಪಡೆದರು.

**ಧಮ್ಮ ವಾಣಿ ಸಂಗ್ರಹ ( ವಿಪಶ್ಯನ ಸಂಶೋಧನಾ ಸಂಸ್ಥೆ) ಪುಟ–13**

## ಧಮ್ಮವು ಮರಳಿದ ಮತ್ತು ಹರಡಿದ ಸುವರ್ಣ ಮಹೋತ್ಸವ ವರ್ಷ : ನಮ್ಮ ಆಚಾರ್ಯರಾದ ಶ್ರೀ ಗೋಯಂಕಾಜಿಯವರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಒಂದು ಅದ್ಭುತ ಸಂದರ್ಭ.

**(ಜನವರಿ, 2019ರ ಇಂಗ್ಲಿಷ್ 'ವಿಪಶ್ಯನ ವಾರ್ತಾಪತ್ರ' ದಿಂದ ಅನುವಾದಿಸಲಾಗಿದೆ.)**

ವಿಪಶ್ಯನ ಧ್ಯಾನವು ಭಾರತಕ್ಕೆ ಮರಳಿದ ಮತ್ತು ವಿಶ್ವದಾದ್ಯಂತ ಹರಡಿದ ಐವತ್ತನೇ ವರ್ಷದ ಸುವರ್ಣ ಮಹೋತ್ಸವವನ್ನು, ಜುಲೈ 3, 2018 ರಿಂದ ಜುಲೈ 2, 2019ರ ವರ್ಷ ಪೂರ್ತಿ ಆಚರಿಸಲಾಯಿತು. ಇದು ಗೋಯಂಕಾಜಿಯವರ ಎಲ್ಲಾ ವಿದ್ಯಾರ್ಥಿಗಳ ಪ್ರತಿನಿತ್ಯದ ಅಭ್ಯಾಸವನ್ನು ಬಲಗೊಳಿಸುವುದರಲ್ಲಿ ಸಹಕಾರಿಯಾಗುತ್ತದೆ ಎಂದು ಆಶಿಸಲಾಗಿದೆ. ಈ ಉದ್ದೇಶ ಸಾಧನೆಗಾಗಿ ಗ್ಲೋಬಲ್ ವಿಪಶ್ಯನ ಪಗೋಡಾದಲ್ಲಿ ವರ್ಷ ಪೂರ್ತಿ, ಪ್ರತಿ ದಿನ ಒಂದು ದಿನದ ಶಿಬಿರ ನಡೆಸಲಾಯಿತು. ಹಳೆಯ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದರು. ಇತರೆ ಸ್ಥಳಗಳಲ್ಲೂ ಧ್ಯಾನ ಸಾಧಕರು ಈ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ ಮಾಡಿದರು. ಇದು ನಾವು ಪೂಜ್ಯ ಗೋಯಂಕಾಜಿಯವರನ್ನು ಸ್ಮರಿಸುವ ಮತ್ತು ಅವರಿಗೆ ನಿಜವಾದ ಕೃತಜ್ಞತೆ ತೋರಿಸುವ ರೀತಿ. (ಕೆಲವು ಮಾರ್ಪಾಡು ಮಾಡಲಾಗಿದೆ.)

ಜಗತ್ಪ್ರಸಿದ್ಧ ವಿಪಶ್ಯನ ಆಚಾರ್ಯರಾದ ಶ್ರೀ ಸತ್ಯನಾರಾಯಣ ಗೋಯಂಕರವರು ಪರಿಶುದ್ಧ ಧರ್ಮದ ಮಾರ್ಗಕ್ಕೆ ಬರುವ ಮುಂಚಿನ ಅವರ ವ್ಯಕ್ತಿಚಿತ್ರವನ್ನು ಇಲ್ಲಿ ಕೊಡಲಾಗಿದೆ. ಬಹಳ ಚಿಕ್ಕ ವಯಸ್ಸಿನಿಂದಲೇ ಭಕ್ತಿಯ ಭಾವ ತೀವ್ರತೆಯಲ್ಲಿ ಮುಳುಗಿದ್ದ ವ್ಯಕ್ತಿಯು ಹೇಗೆ ಬದಲಾದರು ಎಂಬುದು ಇತರರಿಗೂ ಪ್ರೇರಣೆ ನೀಡಬಹುದು ಎಂಬುದೇ ಇದರ ಉದ್ದೇಶ. ಈ ಮಾಲಿಕೆಯನ್ನು ಅವರ ಆತ್ಮಕಥನದಿಂದ ಕೊಡುತ್ತಿದ್ದೇವೆ.

**ಭಾಗ–5**

### ಬುದ್ಧರ ಬಗೆಗೆ ಅನಂತ ಭಕ್ತಿ

ಬುದ್ಧರ ಬಗೆಗೆ ಅನೇಕ ತಪ್ಪು ಪೂರ್ವಗ್ರಹಗಳನ್ನು ಖಂಡಿತವಾಗಿ ನಾನು ಹೊಂದಿದ್ದೆ. ಆದಾಗ್ಯೂ, ಈ ಸರ್ವಶ್ರೇಷ್ಠ ವ್ಯಕ್ತಿಯ ಬಗೆಗೆ ನನಗಿದ್ದ ಅಗಾಧವಾದ ಗೌರವ ಮತ್ತು ಭಕ್ತಿಯ ಭಾವದ ಮೇಲೆ ಇದು ಪರಿಣಾಮ ಬೀರಲಿಲ್ಲ. ಸಮಯ ಕಳೆದಂತೆ ಈ ಭಕ್ತಿ ಮತ್ತು ಗೌರವ ಬೆಳೆಯುತ್ತಾ ಹೋದವು. ಯುದ್ಧಕ್ಕಿಂತ ಮುಂಚೆ ಸ್ಥಳೀಯ ಬರ್ಮೀಯರ ಜೊತೆಗಿನ ನನ್ನ ಸಂಪರ್ಕ ಕಡಿಮೆಯಿತ್ತು. ಭಾರತೀಯರಾದ ನಾವು ನಮ್ಮದೇ ಸಮುದಾಯಗಳ ಕಾಲನಿಗಳನ್ನು (ಹಟ್ಟಿಗಳನ್ನು) ಹೊಂದಿದ್ದೆವು. ಅವು ಮಾರವಾಡಿ, ಗುಜರಾತಿ, ಬಂಗಾಳಿ, ಪಂಜಾಬಿ, ಮದ್ರಾಸಿ ಮುಂತಾದ ಚಿಕ್ಕ ಗುಂಪುಗಳಾಗಿ ವಿಗಂಡಣೆಗೊಂಡಿದ್ದವು. ಬರ್ಮಾದಲ್ಲಿ ಅದು ಪುಟ್ಟ ಭಾರತವಾಗಿತ್ತು. ನಾನು ಇಂತಹ ವಾತಾವರಣದಲ್ಲಿ ಬೆಳೆದೆ. ಆದರೆ ಯುದ್ಧದ ನಂತರ ಬರ್ಮೀಯರ ಜೊತೆಗಿನ ನನ್ನ ಸಂಪರ್ಕ ಹೆಚ್ಚಾಯಿತು ಮತ್ತು ಹೆಚ್ಚು ಆತ್ಮೀಯವಾಯಿತು. ಬುದ್ಧರ ಬಗೆಗಿನ ಅವರ ಭಕ್ತಿಯ ಭಾವದಿಂದ ನಾನು ಪ್ರಭಾವಿತನಾದೆ. ಪಕ್ಕದ ದಕ್ಷಿಣ ಏಷ್ಯಾ ಮತ್ತು ಪೂರ್ವ ಏಷ್ಯಾ ದೇಶಗಳಿಗೆ ವ್ಯಾಪಾರದ ಸಲುವಾಗಿ ನಾನು ಆಗಿಂದಾಗ್ಗೆ ಪ್ರಯಾಣಿಸುತ್ತಿದ್ದೆ. ಬುದ್ಧರ ಬಗೆಗೆ ಅವರಿಲ್ಲಿದ್ದ ಅಗಾಧವಾದ ಭಕ್ತಿಯನ್ನು ನೋಡಿ ನನಗೆ ಹೆಮ್ಮೆ ಎನಿಸುತ್ತಿತ್ತು.

ನೇಪಾಳದಲ್ಲಿ ಹುಟ್ಟಿ, ಭಾರತದಲ್ಲಿ ಜ್ಞಾನೋದಯ ಪಡೆದ ಈ ವ್ಯಕ್ತಿಯು ಹೇಗೆ ಜಗತ್ಪ್ರಸಿದ್ಧರಾದರು ಮತ್ತು ಹೇಗೆ ಆರಾಧಿಸಲ್ಪಟ್ಟರು ಮತ್ತು ಎಷ್ಟೊಂದು ಜನರಿಂದ ವಿರೋಧಿಸಲ್ಪಟ್ಟರು ಎಂಬುದನ್ನು ಅವಲೋಕಿಸಿದೆ. ನಿಷ್ಠಾವಂತರು ಅವರನ್ನು ಪೂಜಿಸಲು ಅವರ ಪುತ್ಥಳಿಗಳನ್ನು ಮರ, ಮಣ್ಣು, ಕಲ್ಲು ಮತ್ತು ಅಮೃತ ಶಿಲೆಗಳಲ್ಲಿ ಮಾತ್ರ ಕೆತ್ತಲಿಲ್ಲ, ಬಂಗಾರ ಮತ್ತು ಉಜ್ವಲ ಹಸಿರು ಬಣ್ಣದ ಪ್ರಶಸ್ತ ಶಿಲೆ (ಪಚ್ಚೆ)ಯಲ್ಲೂ ಕೆತ್ತಿದರು. ಇದು ನಿಜವಾಗಿಯೂ ಭಾರತ ಮತ್ತು ನೇಪಾಳ ಎರಡೂ ದೇಶಗಳು ಹೆಮ್ಮೆಪಡುವಂತಹುದು. ಇದನ್ನು ನೋಡಿದಾಗ ಬುದ್ಧರ ಮೇಲಿನ ನನ್ನ ಗೌರವವು ಇಮ್ಮಡಿಸಿತು.

ಬರ್ಮಾದ ಯುದ್ಧಾನಂತರದ ವರ್ಷಗಳಲ್ಲಿ ನಾನು ರಾಮಕೃಷ್ಣ ಮಿಷನ್ ಸೇರಿದೆ. ಬಹಳ ವರ್ಷಗಳ ಕಾಲ ಅವರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಸಮಿತಿಗಳ ಮತ್ತು ಸೇವಾಶ್ರಮದ (ಮಿಷನ್ ನಡೆಸುತ್ತಿದ್ದ ಉಚಿತ ಆಸ್ಪತ್ರೆ) ಕ್ರಿಯಾಶೀಲ ಸದಸ್ಯನಾಗಿದ್ದೆ. ಶ್ರೀ ರಾಮಕೃಷ್ಣ ಪರಮಹಂಸರ ನೇರ ಮತ್ತು ಸರಳ ಬೋಧನೆಗಳಿಗೆ ಮತ್ತು ಇತರ ಧರ್ಮಗಳ ಬಗೆಗೆ ಅವರ ತೆರೆದ ಮತ್ತು ಧಾರಾಳ ಅಭಿಪ್ರಾಯಗಳಿಗೆ ಆಕರ್ಷಿತನಾದೆ.

ಆದರೆ ನನ್ನನ್ನು ಬಹಳ ಆಕರ್ಷಿಸಿದವರು ಸ್ವಾಮಿ ವಿವೇಕಾನಂದರು. ಅವರ ಉಪನ್ಯಾಸಗಳು, ಪ್ರಬಂಧಗಳು ಮತ್ತು ಪತ್ರಗಳನ್ನು ಓದುವಾಗ ಸಮ್ಮೋಹನಕ್ಕೊಳಗಾಗುತ್ತಿದ್ದೆ. ಬಾಲ್ಯದಿಂದಲೇ ನನ್ನ ಹೃದಯವನ್ನು ತುಂಬಿದ್ದ ದೇಶ ಮತ್ತು ಧರ್ಮದ ಬಗೆಗಿನ ಪ್ರೀತಿಯು, ಬಿರಿದು ಹೋಗುವಷ್ಟು ಈಗ ತುಂಬಿತ್ತು.

ಬುದ್ಧ ಮತ್ತು ಅವರ ಬೋಧನೆಗಳ ಬಗೆಗಿನ ವಿವೇಕಾನಂದರ ಮಾತುಗಳು ನನಗೆ ಗಾಢವಾದ ಸ್ಫೂರ್ತಿಯ ಸೆಲೆಯಾದವು. ಬುದ್ಧರ ತತ್ವಗಳನ್ನು ಅವರು ಒಪ್ಪದಿದ್ದರೂ, ಅವರನ್ನು ಗೌರವಿಸುತ್ತಿದ್ದರು. ಅವರ ನೇರವಾದ ಮತ್ತು ಪ್ರಾಮಾಣಿಕವಾದ ಮಾತುಗಳು ಹೀಗಿದ್ದವು :

"ನನ್ನ ಜೀವನ ಪರ್ಯಂತ, ನಾನು ಬುದ್ಧರನ್ನು ಮೆಚ್ಚಿದ್ದೇನೆ ಮತ್ತು ಗೌರವಿಸಿದ್ದೇನೆ, ಆದರೆ ಅವರ ತತ್ವಗಳನ್ನಲ್ಲ. ಸರ್ವಶ್ರೇಷ್ಠ ವ್ಯಕ್ತಿಗಳಲ್ಲಿ, ನಾನು ಅವರನ್ನು ಅತ್ಯಂತ ಹೆಚ್ಚು ಗೌರವಿಸುತ್ತೇನೆ. ಆ ಧೈರ್ಯ ಮತ್ತು ನಿರ್ಭಯ, ಆಳವಾದ ಸಮುದ್ರದಂತಹ ಪ್ರೀತಿ.... ಅದೇ ಬುದ್ಧ, ಮನಸ್ಸಿನ ಅತ್ಯುತ್ತಮ

ಗುಣಗಳನ್ನು ಹೊಂದಿದ್ದ ಗುರು (ಬೋಧಕ), ಶಕ್ತಿ ಮತ್ತು ಸರಿಸಾಟಿಯಿಲ್ಲದ ಹೃದಯದ ಗುಣಗಳು–ಪರಾನುಭೂತಿ ಶಕ್ತಿ, ಆಕಾಶದಷ್ಟು ವಿಶಾಲವಾದ ಹೃದಯ." ಅವರ ಆಲೋಚನೆಗಳಿಂದ ಪ್ರಭಾವಿತನಾಗಿ ಪ್ರತಿಯೊಂದು ಮಾತನ್ನೂ ಆಸ್ವಾದಿಸಿದೆ.

ಈ ಹಿಂದೆ ಹೇಳಿದಂತೆ, ಬುದ್ಧರ ಬೋಧನೆಗಳ ಬಗ್ಗೆ ಚಿಕ್ಕಂದಿನಿಂದಲೇ ನಾನು ತಪ್ಪು ತಿಳುವಳಿಕೆಗಳನ್ನು ಹೊಂದಿದ್ದರೂ, ವಿಶೇಷವಾಗಿ ನನ್ನ ಅಜ್ಜ ಅವರನ್ನು ಪೂಜಿಸುವುದನ್ನು ನೋಡಿದ್ದರಿಂದ ಬುದ್ಧರ ವ್ಯಕ್ತಿತ್ವಕ್ಕೆ ನಾನು ಆಕರ್ಷಿತನಾದೆ. ಅವರ ಬಗೆಗಿನ ನನ್ನ ಭಕ್ತಿಯ ಭಾವ ಬೆಳೆಯುತ್ತಾ ಹೋಯಿತು. ವಿವೇಕಾನಂದರ ಸ್ಫೂರ್ತಿದಾಯಕ ಮಾತುಗಳು ಬುದ್ಧರ ಬಗೆಗಿನ ನನ್ನ ಭಕ್ತಿಯನ್ನು ಇನ್ನೂ ಹೆಚ್ಚಿಸಿದವು.

ಆಗಿನ ಕಾಲದಲ್ಲಿ ನಾನು ರಚಿಸಿದ ಪದ್ಯಗಳಲ್ಲಿ ಬುದ್ಧರ ಗುಣಗಾನ ವಿರುತ್ತಿತ್ತು. ಒಂದು ಪದ್ಯ ಈ ರೀತಿ ಇತ್ತು:

"ಅವರು, ಎಲ್ಲಾ ತಿಳಿದವರು, ಬುದ್ಧ ಎಂದು ಕರೆಸಿಕೊಳ್ಳುವವರು ಭೂಮಿಯ ಮೇಲೆ ಜನಿಸಿದ್ದಾರೆ; ವಿಶ್ವವೇ ಅವರ ಅನುಯಾಯಿ ಆಗಿರುವುದರಿಂದ, ಕರುಣೆ ಎಲ್ಲಾ ಕಡೆ ಹರಡುತ್ತದೆ. ಬುದ್ಧರಲ್ಲಿ ವಿಶ್ವಾಸವಿರುವ ಜನರು ಬುದ್ಧರಲ್ಲಿ, ಧಮ್ಮದಲ್ಲಿ ಮತ್ತು ಸಂಘದಲ್ಲಿ ಶರಣು ಹೋದರು."

'ಧಮಾಲ್' ಎಂಬ ಶೀರ್ಷಿಕೆಯ ಮತ್ತೊಂದು ಪದ್ಯದಲ್ಲಿ ಪವಿತ್ರ ಭಾರತ ಭೂಮಿಯನ್ನು ಸ್ತುತಿಸುತ್ತಾ, ನಾನು ರಾಜಸ್ಥಾನಿಯಲ್ಲಿ ಬರೆದೆ:

" ಓ ಭಾರತ! ಈ ನನ್ನ ಪ್ರೀತಿಯ ಭೂಮಿ.

ನೂರಾರು ಸ್ವರ್ಗಗಳಿಗಿಂತ ಅದು ಮಿಗಿಲಾದದ್ದು, ನನ್ನ ಪ್ರೀತಿಯ ಭಾರತ ಭೂಮಿ.

ರಾಮ, ಕೃಷ್ಣ, ಮತ್ತು ಬುದ್ಧರಂತಹ ಸರ್ವಶ್ರೇಷ್ಠ ವ್ಯಕ್ತಿಗಳು ಇಲ್ಲಿ ಜನಿಸಿದರು. ಸರ್ವಶಕ್ತ ದೇವರು ಇಲ್ಲಿ ಜನ್ಮ ತಳೆಯಲು ಹಾತೊರೆಯುತ್ತಾನೆ."

ದೇವರ ಅವತಾರಗಳಾದ ರಾಮ ಮತ್ತು ಕೃಷ್ಣರ ಜೊತೆ ಬುದ್ಧರನ್ನು ಇಟ್ಟು, ಆಗಿನ ಕಾಲದ ನನ್ನ ನಂಬಿಕೆಗಳ ಪ್ರಕಾರ ನಾನು ಬುದ್ಧರಿಗೆ ಅತ್ಯುನ್ನತ ಗೌರವವನ್ನು ಕೊಟ್ಟೆ. ದೇವರು ಬರಲು ಹಂಬಲಿಸುವ, ಇಲ್ಲಿ ವಿವಿಧ ಅವತಾರಗಳನ್ನು ಎತ್ತಲು ಕಾರಣಗಳನ್ನು ಹುಡುಕುವ ಮತ್ತು ದೇವರ ಅವತಾರಗಳಿಂದ ಪಾವನವಾದ ಈ ಪವಿತ್ರ ಭಾರತ ಭೂಮಿಗೂ ಗೌರವ ಸಲ್ಲಿಸಿದೆ.

**ಹಾಸ್ಯಾಸ್ಪದವಾದ ಸಂಗತಿ:**

ನನ್ನ ಬರವಣಿಗೆಗಳಲ್ಲಿ, ಒಂದು ಕಡೆ, ಬುದ್ಧರ ಮೇಲೆ ಪ್ರಶಂಸಾಗೀತೆಗಳನ್ನು ಬರೆದೆ. ಇನ್ನೊಂದು ಕಡೆ, ಅವರ ಬೋಧನೆಗಳು ಒಪ್ಪಿಕೊಳ್ಳುವಂತಹವಲ್ಲ ಎಂದು ಅವುಗಳಿಂದ ದೂರ ಉಳಿದೆ. ಎಂತಹ ವಿಪರ್ಯಾಸ! ಎಂತಹ ವ್ಯಂಗ್ಯ!

ಪರಿಪೂರ್ಣವಾಗಿ ಅತ್ಯುತ್ತಮರಾದ ವ್ಯಕ್ತಿಯು ವಿಶ್ವಕ್ಕೆ ಹೇಗೆ ಹಾನಿಕಾರಕ ಬೋಧನೆಗಳನ್ನು ಕೊಡಲು ಸಾಧ್ಯ? ಎಂದು ಎಳ್ಳಷ್ಟೂ ನಾನು ಆಶ್ಚರ್ಯಪಡಲಿಲ್ಲ. ಅಥವಾ ವಿಶ್ವಕ್ಕೆ ಹಾನಿಕಾರಕ ಜ್ಞಾನವನ್ನು ಕೊಡುವವರನ್ನು ದೊಡ್ಡ ಮತ್ತು ಅತ್ಯುತ್ತಮ ವ್ಯಕ್ತಿ ಎಂದು ಪರಿಗಣಿಸಲು ಸಾಧ್ಯವೇ? ಶತಶತಮಾನಗಳಿಂದ ಪಸರಿಸಿರುವ ನಂಬಿಕೆಗಳ ಪ್ರಭಾವ ಎಷ್ಟೊಂದು ಶಕ್ತಿಯುತವಾಗಿರುತ್ತದೆ!

ಇಂದು ಯಾರಾದರೂ, ಬುದ್ಧ ನಮ್ಮ ವಿಷ್ಣುವಿನ ಅವತಾರ ವಾಗಿರುವುದರಿಂದ ಗೌರವಕ್ಕೆ ಅರ್ಹರಾದವರು ಎಂದು ಹೇಳುತ್ತಾರೆ. ಆದರೆ ಅವರ ಬೋಧನೆಗಳನ್ನು ಬೌದ್ಧಧರ್ಮ ಎಂದು ತಿರಸ್ಕರಿಸುತ್ತಾರೆ. ನಾನು ಏನು ಮಾಡಬೇಕು? ಈ ವಿಪರ್ಯಾಸಕ್ಕೆ ನಗುವುದೇ ಅಥವಾ ಕೋಪಗೊಳ್ಳುವುದೇ? ಎರಡನ್ನೂ ಮಾಡುವುದಿಲ್ಲ. ಕೆಲವು ಅಂಶಗಳನ್ನು ಹೊರತುಪಡಿಸಿ, ಬುದ್ಧರು ತಮ್ಮ ಬೋಧನೆಗಳನ್ನು ನಮ್ಮ ವೈದಿಕ ಧರ್ಮದಿಂದ ತೆಗೆದುಕೊಂಡಿದ್ದಾರೆ ಎಂದು ಸಮಾಜದ ಗಣ್ಯ ವ್ಯಕ್ತಿಯೊಬ್ಬರು ಸಾರ್ವಜನಿಕ ವೇದಿಕೆಯಲ್ಲಿ ಅಥವಾ ಬೌದ್ಧರ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಹೇಳಿದರೂ ನನಗೆ ಅನುಕಂಪ ಮಾತ್ರ ಬರುತ್ತದೆ. ಅಥವಾ " ಧೃತಿ ಕ್ಷಮಾ ದಮೋಸ್ತೆಯಮ್, ಸೌಕಾಮಿಂದ್ರಿಯನಿಗ್ರಹಾ, ಧೀರ್ವಿದ್ಯಾ ಸತ್ಯವಾಕ್ರೋಧೋ, ದಶಕಂ ಧರ್ಮಲಾಕ್ಷನಮ್" (ನಾರದಪರೊ ಪ್ರಾಜಕೋಪನಿಷತ್ 3/24)

ಅಂದರೆ, ಮನು ಅವರು ನಿರೂಪಿಸಿದ ಈ ಹತ್ತು ಧರ್ಮಗಳನ್ನೇ ಬುದ್ಧರು ಬೋಧಿಸಿದ್ದು ಎಂದು ಮನುಸ್ಮೃತಿಯನ್ನು ಉಲ್ಲೇಖಿಸಿ ಯಾರಾದರೂ ಹೇಳಬಹುದು. ಅಂತಹ ಸಮಾರಂಭಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ ಪಕ್ಕದ ದೇಶದಿಂದ ಬಂದ ವಿದ್ವಾಂಸ ಭಿಕ್ಖುವಿನ ಮುಖವು, ಹತ್ತಿಕ್ಕಿದ ರೋಷದಿಂದ, ನೇರಳೆ ಬಣ್ಣಕ್ಕೆ ತಿರುಗಬಹುದು. ಆದರೆ ನನಗೆ ಕೋಪ ಬರುವುದಿಲ್ಲ, ಕೇವಲ ಅನುಕಂಪ ಬರುತ್ತದೆ. ಅನೇಕ ವರ್ಷಗಳ ಕಾಲ ನಾನು ಕೂಡ ಅದೇ ರೀತಿಯ ದಾರಿತಪ್ಪಿದ ನಂಬಿಕೆಗಳಲ್ಲೇ ಸಿಲುಕಿಕೊಂಡಿದ್ದೆ. ಆಗ ನನಗೆ ಸತ್ಯ ತಿಳಿದಿರಲಿಲ್ಲ. ಅದೇ ರೀತಿ ಈ ಜನರೂ ಸತ್ಯವನ್ನು ತಿಳಿದಿಲ್ಲ. ನನ್ನ ಒಳ್ಳೆಯ ಅದೃಷ್ಟ, ಸತ್ಯ ನನಗೆ ಗೋಚರವಾಯಿತು. ಹಾಗೆಯೇ ಇತರರೂ ದಿನಕಳೆದಂತೆ ಈ ಸತ್ಯವನ್ನು ತಿಳಿಯುತ್ತಾರೆ ಮತ್ತು ಈ ತಪ್ಪು ತಿಳುವಳಿಕೆಯಿಂದ ಹೊರಬರುತ್ತಾರೆ. ಆಗ ಪರಿಪೂರ್ಣ ವಿನಮ್ರತೆಯಿಂದ ಮತ್ತು ಹೃದಯಪೂರ್ವಕವಾಗಿ ಅವರೂ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ. ಹೌದು ಖಂಡಿತವಾಗಿ ಅವರು ಒಪ್ಪಿಕೊಳ್ಳುತ್ತಾರೆ.

ಬುದ್ಧರು ನಮ್ಮ ವಿಷ್ಣುವಿನ ಒಂಭತ್ತನೇ ಅವತಾರ ಎಂದು ನಂಬಿ ನಾನು ಅವರನ್ನು ಪೂಜಿಸಲು ಸಿದ್ಧನಿದ್ದೆ. ಆದರೆ ಅವರ ಬೋಧನೆಗಳ ಬಗ್ಗೆ ನಾನು ಏನನ್ನು ಕೇಳಿದೆನೋ, ಅವೆಲ್ಲವೂ ತಪ್ಪು ತಿಳುವಳಿಕೆಗಳು. ನಾನು ಅವರ ದಾರಿಯಲ್ಲಿ ನಡೆಯಲು ಖಂಡಿತವಾಗಿ ಸಿದ್ಧನಿರಲಿಲ್ಲ. ಆದರೆ, ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವು ಯಾವುದನ್ನು ಆಧರಿಸಿರಬೇಕು ಎಂಬುದರ ಬಗ್ಗೆ ಅವರು ಹೇಳಿದ ಮಾತನ್ನು ಯಾವುದೇ ಅನುಮಾನಗಳಿಲ್ಲದೆ ನಾನು ಮೆಚ್ಚಿಕೊಂಡೆ. "ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವು ಅವನ ಕ್ರಿಯೆಗಳನ್ನು ಆಧರಿಸಿರಬೇಕು, ಅವನ ಹುಟ್ಟನ್ನಲ್ಲ" ಎಂದು ಅವರು ಹೇಳಿದರು. ಇದನ್ನು ಬಿಟ್ಟು, ಅವರ ಬೋಧನೆಗಳು ಸಮಾಜಕ್ಕೆ ಮತ್ತು ನಿಜವಾಗಿಯೂ ದೇಶಕ್ಕೆ ಹಾನಿಕಾರಕ ಎಂದು ನಾನು ಯಾವಾಗಲೂ ನಂಬಿದ್ದೆ.

ಅದೊಂದು ವಿಚಿತ್ರವಾದ, ವ್ಯಂಗ್ಯದ ತಿರುವು. ಅಷ್ಟೊಂದು ತಪ್ಪು ಅಭಿಪ್ರಾಯಗಳಿಂದ ತುಂಬಿದ್ದ ವ್ಯಕ್ತಿಯು, ಬುದ್ಧರ ಬೋಧನೆಗಳಿಂದ ಎಷ್ಟೊಂದು ಅಗಾಧವಾಗಿ ಪ್ರಭಾವಿತನಾದ ಮತ್ತು ಎಷ್ಟೊಂದು ಪ್ರಯೋಜನ ಪಡೆದ ಎಂದರೆ, ಜಗತ್ತಿನಾದ್ಯಂತ ಧರ್ಮವನ್ನು ಹರಡಲು ತನ್ನ ಇಡೀ ಜೀವನವನ್ನೇ ಮುಡಿಪಾಗಿಟ್ಟ. ಒಂದು ಅಸಾಧಾರಣ ಘಟನೆಯಿಂದ ಇದು ಆಯಿತು. ಆತನಿಗೆ ಮಾತ್ರ ಪ್ರಯೋಜನವಾಗಲಿಲ್ಲ. ಜಗತ್ತಿನಾದ್ಯಂತ ಲಕ್ಷಾಂತರ ಜನರಿಗೆ ಪ್ರಯೋಜನವಾಯಿತು.

**ನನ್ನ ಮರುಹುಟ್ಟು :**

ನನಗೆ ನೆನಪಿರುವಂತೆ, ನಾನು ಮೈಗ್ರೇನ್ ತಲೆನೋವಿನಿಂದ (ಅರ್ಧ ತಲೆನೋವಿನಿಂದ) ಬಳಲುತ್ತಿದ್ದೆ. ನನ್ನ ಬಾಲ್ಯಾವಸ್ಥೆಯಲ್ಲಿ ಒಂದು ವರ್ಷಕ್ಕೊಮ್ಮೆ ಅಥವಾ ಒಂದೂವರೇ ವರ್ಷಕ್ಕೊಮ್ಮೆ ಅದು ಬಂದು ನನಗೆ ತೊಂದರೆ ಕೊಡುತ್ತಿತ್ತು. ಹರೆಯದಲ್ಲಿ ಅದು ಬರುವುದು, ಒಂದು ವರ್ಷಕ್ಕೆ, ಎರಡು ಅಥವಾ ಮೂರು ಬಾರಿಗೆ ಏರಿಕೆಯಾಯಿತು. ನಾನು 25 ವರ್ಷದವನಾಗುವಷ್ಟೊತ್ತಿಗೆ ತಲೆನೋವುಗಳ ನಡುವಿನ ಅಂತರವು ಕಡಿಮೆಯಾಗುತ್ತಾ ಬಂದು, ಪ್ರತಿ ಹದಿನೈದು ದಿನಕ್ಕೊಮ್ಮೆ ಬರಲು ಶುರುವಾಯಿತು. ಸಹಿಸಲಸಾಧ್ಯವಾದ ನೋವನ್ನು ಉಪಶಮನ ಮಾಡಲು ಸಾಮಾನ್ಯ ನೋವು ನಿವಾರಕ ಮಾತ್ರೆಗಳಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ತಲೆನೋವು ಬಂದಾಗ ವೈದ್ಯರು ನನಗೆ ಮಾರ್ಫೀನ್ ಚುಚ್ಚುಮದ್ದನ್ನು (ಇಂಜೆಕ್ಷನ್) ಕೊಡುತ್ತಿದ್ದರು. ಇದು ನೋವನ್ನು ಉಪಶಮನ ಮಾಡುತ್ತಿತ್ತು, ಆದರೆ ಮಾರನೆಯ ದಿನ ಔಷಧಿಯ ಅಡ್ಡಪರಿಣಾಮಗಳು (ಸೈಡ್ ಎಫೆಕ್ಟ್ಸ್) ಕಾಣಿಸಿಕೊಳ್ಳುತ್ತಿದ್ದವು. ಔಷಧಿಯ ಮಂಪರಿನಿಂದ ಎದ್ದಾಗಿನಿಂದ ಇಡೀ ದಿನ ವಾಂತಿ ಮತ್ತು ನರಗಳ ದೌರ್ಬಲ್ಯವಿರುತ್ತಿತ್ತು.

ಪ್ರತಿ ಹದಿನೈದು ದಿನಗಳಿಗೊಮ್ಮೆ ಸಹಿಸಲಸಾಧ್ಯವಾದ ತಲೆನೋವು, ಒಂದೆರಡು ದಿನಗಳ ಕಾಲ ಮಾರ್ಫೀನ್ ಪ್ರೇರಿತ ಅಡ್ಡ ಪರಿಣಾಮಗಳ ಈ ನರಕ ಸದೃಶ ನೋವನ್ನು ಅನುಭವಿಸಿದೆ. ನಮ್ಮ ಕುಟುಂಬ ವೈದ್ಯರಾದ ಓಂ ಪ್ರಕಾಶ್‌ರವರ

ಜೊತೆಗಿನ ಸಂಬಂಧ ಬಹಳ ಆತ್ಮೀಯವಾಗಿತ್ತು. ಅವರು ನನಗೆ ಸಹೋದರನಂತೆ ಇದ್ದರು. ಬಿಡುವಿಲ್ಲದ ವೈದ್ಯಕೀಯ ವೃತ್ತಿಯಲ್ಲಿದ್ದರೂ, ನನ್ನ ಸಾಮಾಜಿಕ ಚಟುವಟಿಕೆಗಳಲ್ಲಿ ಯಾವಾಗಲೂ ಸಹಾಯ ಮಾಡುತ್ತಿದ್ದರು. ದುಃಖಕರವಾದ ನನ್ನ ಈ ಹಾಳು ತಲೆನೋವಿನ ಬಗ್ಗೆ ಅವರೂ ಚಿಂತಿತರಾಗಿದ್ದರು. ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿದ್ದ, ನನಗೆ ಗೊತ್ತಿದ್ದ ಮ್ಯಾನ್ಮಾರ್‌ನ ಎಲ್ಲಾ ವೈದ್ಯರುಗಳನ್ನೂ ಸಂದರ್ಶಿಸಿದೆ. ಏನೂ ಉಪಯೋಗವಾಗಲಿಲ್ಲ.

ಮತ್ತೂ ಐದು ವರ್ಷಗಳು ಕಳೆದವು. ತಲೆನೋವುಗಳ ನಡುವಿನ ಅವಧಿಯು 15 ದಿನಗಳಿಂದ 8 ಅಥವಾ 10 ದಿನಗಳಿಗೆ ಇಳಿಯಿತು. ಮಾರ್ಫೀನ್ ಪ್ರಮಾಣವನ್ನು ಹೆಚ್ಚು ಮಾಡಬೇಕಾಯಿತು. ಮಾರ್ಫೀನ್ ನನಗೆ ಚಟವಾಗಬಹುದು ಮತ್ತು ಪ್ರತಿದಿನ ನಾನು ಮಾರ್ಫೀನ್ ತೆಗೆದುಕೊಳ್ಳಬೇಕಾಗಬಹುದು ಎಂದು ಡಾ॥ ಓಂ ಪ್ರಕಾಶ್‌ರವರು ಕಳವಳಗೊಂಡಿದ್ದರು. ದಿನವೂ ಮಾರ್ಫೀನ್ ತೆಗೆದುಕೊಳ್ಳುವುದು ಎಂತಹ ದುಃಖಕರ ಪರಿಸ್ಥಿತಿ. ನಾವೆಲ್ಲಾ ಗಂಭೀರವಾಗಿ ಚಿಂತೆಗೊಳಗಾಗಿದ್ದೆವು. ಬಹಳ ಆಲೋಚನೆ ಮಾಡಿ ಮತ್ತು ಈ ಕ್ಷೇತ್ರದ ಇತರೆ ಪರಿಣತಿ ವೈದ್ಯರನ್ನು ಸಂಪರ್ಕಿಸಿ ಓಂ ಪ್ರಕಾಶ್‌ರವರು ಹೇಳಿದರು: " ನೀವು ವ್ಯಾಪಾರಕ್ಕಾಗಿ ಹೊರದೇಶಗಳಿಗೆ ಹೋಗುತ್ತೀರಿ. ಈ ಸಾರಿ ಕೇವಲ ವೈದ್ಯಕೀಯ ಸಹಾಯಕ್ಕಾಗಿ ಹೋಗಿ. ಮೈಗ್ರೇನ್‌ಗೆ ಪರಿಹಾರ ಸಿಗುವುದು ಕಷ್ಟ. ಆದರೆ, ಯಾರಿಗೆ ಗೊತ್ತು, ನೋವು ನಿರ್ವಹಣೆಗೆ ಮಾರ್ಫೀನ್ ಬದಲಾಗಿ ಬೇರೆಯ ಔಷಧಿ ಸಿಗಬಹುದೇನೋ."

ಈ ಸಲಹೆ ನನ್ನನ್ನಷ್ಟೇ ಅಲ್ಲ, ನನ್ನ ಕುಟುಂಬ ಮತ್ತು ಸ್ನೇಹಿತರನ್ನೂ ಚಿಂತೆಗೀಡುಮಾಡಿತು. ಒಬ್ಬ ಬರ್ಮೀಯ ಆತ್ಮೀಯ ಗೆಳೆಯ, ಯು ಥಾನ್ ಟೂನ್, ಸ್ವತಂತ್ರ ಬರ್ಮಾದ ಪ್ರಥಮ ಅಟಾರ್ನಿ ಜನರಲ್ ಮತ್ತು ನಂತರದಲ್ಲಿ ಸುಪ್ರೀಮ್ ಕೋರ್ಟ್‌ನ ನ್ಯಾಯಾಧೀಶರಾದವರು, ವಿದೇಶಗಳಲ್ಲಿ ವೈದ್ಯರ ಫೀ ಹೆಚ್ಚಿರುತ್ತದೆ ಮತ್ತು ಅವರ ಸಂಪರ್ಕಕ್ಕಾಗಿ ಕಾಯುವ ದಿನಗಳೂ ಹೆಚ್ಚಾಗವುದರಿಂದ ಖರ್ಚು ಇನ್ನೂ ಹೆಚ್ಚಾಗುತ್ತದೆ ಎಂಬುದನ್ನು ತಿಳಿದಿದ್ದರು. ಆದ್ದರಿಂದ ಪಶ್ಚಿಮದ ದೇಶಗಳಲ್ಲಿದ್ದ ಬರ್ಮಾದ ರಾಯಭಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಸ್ನೇಹಿತರಿಗೆ ನನ್ನ ಪರಿಚಯದ ಪತ್ರಗಳನ್ನು ಕೊಟ್ಟರು. ಇದು ನನಗೆ ದೊಡ್ಡ ಸಹಾಯವಾಯಿತು.

ಆಗಿಂದಾಗ್ಗೆ ಬರ್ಮಾ ದೇಶಕ್ಕೆ ಭೇಟಿ ನೀಡುತ್ತಿದ್ದುದರಿಂದ ನನ್ನ ಆತ್ಮೀಯ ಗೆಳೆಯರೂ ಆಗಿದ್ದ ಶ್ರೀ ಜೈಪಾಲ್‌ರವರು ಆ ಸಮಯದಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿ ಅಮೇರಿಕದಲ್ಲಿದ್ದರು. ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಇಂಗ್ಲೆಂಡ್ ಮತ್ತು ಅಮೆರಿಕದ ಹಿರಿಯ ವೈದ್ಯರುಗಳಿಂದ ಚಿಕಿತ್ಸೆ ಪಡೆಯುವುದನ್ನು ಸುಲಭಗೊಳಿಸಿದ ಅವರ ಸಹಾಯ ಬೆಲೆಕಟ್ಟಲಾಗದ್ದು. ಅವರ ಸಹಾಯದಿಂದ ಮೈಗ್ರೇನ್‌ಗಳ ಚಿಕಿತ್ಸೆಯಲ್ಲಿ ಪರಿಣತಿ ಹೊಂದಿದ್ದ ನ್ಯೂಯಾರ್ಕ್‌ನ ಹೆಸರಾಂತ ಫಿಜಿಷಿಯನ್ ಡಾ॥ ಹಿಟ್ಟ್‌ಕ್‌ರವರ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಲು ಸುಲಭವಾಯಿತು. ಜವಾಹರಲಾಲ್ ನೆಹರು ಅವರ ತಂಗಿ ಮತ್ತು ಹೆಸರಾಂತ ರಾಜಕಾರಣಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರವರ, ನನ್ನ ತರಹದೇ ಮೈಗ್ರೇನ್ ತಲೆನೋವನ್ನು ಈ ವೈದ್ಯರು ಸಂಪೂರ್ಣವಾಗಿ ಗುಣಪಡಿಸಿದ್ದರು. ಅದೃಷ್ಟವೆಂಬಂತೆ, ಇವರು ಮಾತ್ರವಲ್ಲ, ನಾನು ಸಂಧಿಸಿದ ಇತರೆ ಎಲ್ಲಾ ವೈದ್ಯರುಗಳೂ ನನಗೆ ಯಾವುದೇ ಪರಿಹಾರ ನೀಡುವಲ್ಲಿ ವಿಫಲರಾದರು. ಜಪಾನ್‌ನಲ್ಲಿ ನಮ್ಮ ಶಾಖಾ ಕಛೇರಿ ಇತ್ತು. ಅಲ್ಲಿಯ ವೈದ್ಯರುಗಳು ಸಹ ಅತ್ಯುತ್ತಮ ಪ್ರಯತ್ನ ಮಾಡಿದರು. ತುಂಬಾ ಸಮಯ ಮತ್ತು ಹಣವನ್ನು ಖರ್ಚು ಮಾಡಿದಾಗ್ಯೂ, ಯಶಸ್ಸು ಸಿಗಲಿಲ್ಲ. ಮೈಗ್ರೇನ್ ಬಿಡಿ, ಮಾರ್ಫೀನ್‌ನಿಂದ ಸಹ ಬಿಡುಗಡೆ ಸಿಗಲಿಲ್ಲ.

ಪರಿಹಾರ ಹುಡುಕುತ್ತಾ ತಿಂಗಳುಗಳು ಕಳೆದ ಮೇಲೆ, ಬಹಳ ಖಿನ್ನನಾಗಿ ಮನೆಗೆ ಹಿಂತಿರುಗಿದೆ. ಮೈಗ್ರೇನ್‌ನ ಆಕ್ರಮಣ ಈಗ ವಾರಕ್ಕೊಮ್ಮೆಯಾಯಿತು. ಪ್ರತಿಯೊಬ್ಬರೂ, ವಿಶೇಷವಾಗಿ ನನ್ನ ಸ್ನೇಹಿತ ಯು ಥಾನ್ ಟೂನ್‌ರವರು, ತುಂಬಾ ಆತಂಕಪಟ್ಟರು. ಒಂದು ದಿನ ಅವರು ಹೇಳಿದರು : " ಮೈಗ್ರೇನ್ ಒಂದು ಮನೋದೈಹಿಕ ಕಾಯಿಲೆ ಆಗಿರುವುದರಿಂದ ಮತ್ತು ಮಾನಸಿಕ ಒತ್ತಡಕ್ಕೆ ಸಂಬಂಧಿಸಿರುವುದರಿಂದ, ನೀವು ಒತ್ತಡದಿಂದ ಮುಕ್ತವಾದರೆ, ಪರಿಹಾರ ತನ್ನಷ್ಟಕ್ಕೆ ತಾನೇ ಬರುತ್ತದೆ."

ಅವರ ಮಾತಿನ ತಾರ್ಕಿಕತೆಯನ್ನು ನಾನು ಗ್ರಹಿಸಿದೆ. ಏಕೆಂದರೆ, ಕಳೆದ ಐದರಿಂದ ಏಳು ವರ್ಷಗಳಲ್ಲಿ, ನನ್ನ ವ್ಯಾಪಾರವಷ್ಟೇ ಅಲ್ಲ, ನನ್ನ ಸಾಮಾಜಿಕ ಚಟುವಟಿಕೆಗಳೂ ಅಗಾಧವಾಗಿ ವಿಸ್ತಾರಗೊಂಡು ನನ್ನ ಮನಸ್ಸಿನ ಮೇಲೆ ಹೆಚ್ಚು ಒತ್ತಡ ಹೇರಿದ್ದವು. ಜೊತೆಗೆ, ಬಹಳ ಚಿಕ್ಕ ವಯಸ್ಸಿನಲ್ಲಿಯೇ ಸಾಧಿಸಿದ ಅತ್ಯಧಿಕ ಯಶಸ್ಸು, ಆಕ್ರಮಣಕಾರಿ ಪುರುಷ ಸ್ವಭಾವ ಮತ್ತು ಅತ್ಯಧಿಕ ಕೋಪ ಈ ಒತ್ತಡವನ್ನು ಹೆಚ್ಚಿಸಿದ್ದವು. ಇದರಿಂದ ಹೊರಬರುವ ಮಾರ್ಗ ನನಗೆ ಕಾಣಲಿಲ್ಲ ಮತ್ತು ಒತ್ತಡ ಕಡಿಮೆ ಮಾಡಿಕೊಳ್ಳುವುದು ಹೇಗೆಂದು ತಿಳಿಯಲಿಲ್ಲ. ಹೆಚ್ಚು ವಿಶ್ರಾಂತಿ ಪಡೆಯಲು ಪ್ರಯತ್ನಿಸಿದೆ, ಇಡೀ ದೇಹದ ಮಾಂಸಖಂಡಗಳನ್ನು ಮತ್ತು ಮನಸ್ಸನ್ನು ಸಡಿಲಗೊಳಿಸುವ ಕ್ರಿಯೆಯಾದ ಯೋಗದ ಶವಾಸನವನ್ನು ಮಾಡಿದೆ. ಭಜನೆಗಳನ್ನು ಹಾಡಿದೆ. ಯಾವುದೂ ಪ್ರಯೋಜನವಾಗಲಿಲ್ಲ.

ನನ್ನ ಸ್ನೇಹಿತ ಯು ಥಾನ್ ಟೂನ್ ಅವರನ್ನು ಒಂದು ದಿನ ನಾನು ಭೇಟಿ ಮಾಡಿದಾಗ, ಬರ್ಮಾ ಸರ್ಕಾರದ ಮಹಾಲೇಖಪಾಲರಾದ ಸಯಾಜಿ ಉ ಬಾ ಖಿನ್‌ರವರು ಧ್ಯಾನ ಹೇಳಿಕೊಡುತ್ತಾರೆ ಎಂದು ಪ್ರಸ್ತಾಪಿಸಿದರು. "ಇದು ಖಂಡಿತವಾಗಿ ನಿಮಗೆ ಸಹಾಯ ಮಾಡಲೇಬೇಕು. ಏಕೆಂದರೆ ಇದು ನಿಮ್ಮ ಒತ್ತಡವನ್ನು ಕಡಿಮೆ ಮಾಡಿ ನಿಮ್ಮ ಮನಸ್ಸನ್ನು ಶಾಂತಗೊಳಿಸುವ ಸಾಧ್ಯತೆ ಇದೆ. ಅವರನ್ನು ನೀವು ಏಕೆ ಭೇಟಿ ಮಾಡಬಾರದು" ಎಂದು ಹೇಳಿದರು. " ನಿಮ್ಮ ಸಂದರ್ಶನವನ್ನು ನಾನು ಏರ್ಪಡಿಸುತ್ತೇನೆ" ಎಂದು ಸೇರಿಸಿದರು. ನಾನು ಏನನ್ನೂ ಹೇಳದೆ ಮನೆಗೆ ಬಂದೆ. ನನ್ನ ಮೌನವನ್ನೇ ನನ್ನ ಸಮ್ಮತಿ ಎಂದು ಪರಿಗಣಿಸಿ, ರಾಯಲ್ ಲೇಖ್ ದಡದಲ್ಲಿದ್ದ ಸಯಾಜಿಯವರ ಅಧಿಕೃತ ನಿವಾಸದಲ್ಲಿ ಸಂದರ್ಶನವನ್ನು ಏರ್ಪಡಿಸಿದರು.

ನಾನು ದಿಕ್ಕುಗೆಟ್ಟ ಸ್ಥಿತಿಯಲ್ಲಿದ್ದೆ. ಅಂತರ್‌ರಾಷ್ಟ್ರೀಯ ಖ್ಯಾತಿ ಪಡೆದ ಯು ಥಾನ್ ಟೂನ್‌ರವರು, ಆಗ ಬರ್ಮಾದಲ್ಲಿ ನಡೆಯುತ್ತಿದ್ದ, 'ವಿಶ್ವ ಬೌದ್ಧ ಸಮ್ಮೇಳನ'ದ ನಾಯಕರಾಗಿದ್ದರು. ಬರ್ಮಾ ಸರ್ಕಾರದ ಆಶ್ರಯದಲ್ಲಿ ಬೌದ್ಧ ಸಂಘಟನೆಯು ನಡೆಸುತ್ತಿದ್ದ ' ಆರನೇ ಸಂಗಾಯನ ತಿಪಿಟಿಕದ' ಪ್ರಮುಖ ಸಂಘಟನಕಾರರಾಗಿದ್ದರು. ಅವರು ಸೂಚಿಸುತ್ತಿರುವ ಧ್ಯಾನವು ನಿಸ್ಸಂದೇಹವಾಗಿ ಬೌದ್ಧ ಧರ್ಮಕ್ಕೆ ಸೇರಿದ್ದು. ಅದನ್ನು ನಾನು ಹೇಗೆ ಸ್ವೀಕರಿಸುವುದು? 'ಓಂ ನಮಃ ಶಿವಾಯ' ಎಂದು ನಾವು ಪಠಿಸುತ್ತೇವೆ. ' ಓಂ ನಮಃ ಬುದ್ಧಾಯ' ಎಂದು ಪಠಿಸಲು ಅವರು ನಮಗೆ ಹೇಳುತ್ತಾರೆ. ಅದನ್ನು ಪಠಿಸುವಾಗ ನಾನು ಬೌದ್ಧ ಧರ್ಮೀಯನಾದರೆ ಹೇಗೆ? ನಾನು ನಾಸ್ತಿಕನಾಗುತ್ತೇನೆ ಮತ್ತು ನರಕ ಸೇರುತ್ತೇನೆ. ನಾನು ಇದನ್ನು ಮಾಡಲು ಸಾಧ್ಯವಿಲ್ಲ ಎನಿಸಿತು. ನಾನು ಈ ನೋವಿನಿಂದ ಸತ್ತರೂ ಸರಿಯೇ, ನನ್ನ ಧರ್ಮವನ್ನು ನಾನು ಬಿಡುವುದಿಲ್ಲ ಮತ್ತು ಬೇರೊಬ್ಬರ ಧರ್ಮವನ್ನು ಸೇರುವುದಿಲ್ಲ ಎಂದು ತೀರ್ಮಾನಿಸಿದೆ.

**'ಸ್ವಧರ್ಮೇ ನಿಧನಂ ಶ್ರೇಯ್ಯ, ಪರಧರ್ಮೋ ಭಯಾ ವಹಾ'** ಅಂದರೆ, "ತನ್ನ ಸ್ವಂತ ಧರ್ಮದಲ್ಲಿ ಸಾಯುವುದು ಉತ್ತಮ; ಇತರರ ಧರ್ಮವು ಭಯಾನಕವಾಗಿರುತ್ತದೆ" ಎಂಬ ಭಗವದ್ಗೀತೆಯ ಮಾತುಗಳು ನನ್ನ ಮನಸ್ಸಿನಲ್ಲಿ ಪ್ರತಿಧ್ವನಿಸಿದವು.

ಮಾರನೆಯ ದಿನ ಸಾಯಂಕಾಲ ಸಯಾಜಿ ಉ ಬಾ ಖಿನ್‌ರವರನ್ನು ನಾನು ಭೇಟಿ ಮಾಡಬೇಕಾಗಿತ್ತು. ಭೇಟಿ ಮಾಡಲು ಹೋಗದಿದ್ದರೆ, ಅದು ಅಸಭ್ಯತೆಯಾಗುತ್ತಿತ್ತು. ಏಕೆಂದರೆ, ಯು ಥಾನ್ ಟೂನ್ ಕೇವಲ ನನ್ನ ಸ್ನೇಹಿತನಾಗಿರಲಿಲ್ಲ. ಸುಪ್ರಸಿದ್ಧ ಬೌದ್ಧ ಮುಖಂಡರಾಗಿದ್ದರು. ಸಂದರ್ಶನವನ್ನು ನಿಗದಿ ಮಾಡಿದ ಮೇಲೆ ಹೋಗದಿದ್ದರೆ ಅದು ಅವರನ್ನು ಅವಮಾನಿಸಿದಂತಾಗುತ್ತದೆ ಮತ್ತು ನಾನು ನಿಜವಾಗಿಯೂ ಬುದ್ಧರ ವಿರೋಧಿ ಎಂದು ನನ್ನ ಸ್ನೇಹಿತ ಭಾವಿಸಬಹುದು. ಈ ಆಲೋಚನೆಗಳು ನನ್ನ ತಲೆಯಲ್ಲಿ ಸುಳಿಯಂತೆ ಸುತ್ತುತ್ತಿದ್ದವು. ಜೊತೆಗೆ ಸಾವಿರಾರು ಸಂದಿಗ್ಧತೆ ಗಳೊಂದಿಗೆ ನಿಗದಿತ ಸಮಯದಲ್ಲಿ ನಾನು ಸಯಾಜಿಯವರ ಮನೆಗೆ ಹೋದೆ. ಮನೆಯಲ್ಲಿ ಅವರೊಬ್ಬರೇ ಇರುವುದನ್ನು ಗಮನಿಸಿದೆ. ಬಹುಶಃ ಅವರ ಶ್ರೀಮತಿಯವರು ಹೊರಗೆ ಹೋಗಿರಬಹುದು ಎಂದು ಭಾವಿಸಿದೆ. ನನ್ನ ಕಣ್ಣುಗಳು ಮನೆಯ

RNI. No. : KARKAN/2015/68727. Postal Regn. No.: RNP/KA/BGS/2253/2020-22
Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30.

ವಿವರಗಳನ್ನು ಗ್ರಹಿಸಿದವು. ಯಾರೂ ಸೇವಕರಿರಲಿಲ್ಲ. ಸಾಮಾನ್ಯ ಅಧಿಕಾರಿಯ ಮನೆಯಲ್ಲಿರುವಂತೆ, ಪೀಠೋಪಕ ರಣಗಳು ತುಂಬಾ ಸಾಮಾನ್ಯವಾಗಿದ್ದವು; ಸರಳ, ಪ್ರಾಚೀನ. ಇಂತಹ ಹಿತಕರವಾದ ವಾತಾವರಣದಲ್ಲಿ ಅವರ ಹತ್ತಿರ ಕುಳಿತುಕೊಂಡಿದ್ದು ನನಗೆ ಹಿತವೆನಿಸುತ್ತಿತ್ತು. ಪ್ರಶಾಂತ ಶಾಂತಿ ಅವರ ಮುಖದಲ್ಲಿ ತುಂಬಿತ್ತು. ವಾಸ್ತವವಾಗಿ ಇಡೀ ವಾತಾವರಣವೇ ಶಾಂತಿಯನ್ನು ಹೊರಸೂಸುತ್ತಿತ್ತು. ನಾನು ಕುಳಿತುಕೊಳ್ಳುತ್ತಿದ್ದಂತೆಯೇ, "ಯು ಥಾನ್ ಟೂನ್ ನಿಮ್ಮ ಬಗ್ಗೆ ಹೇಳಿದ್ದಾರೆ. ನೀವು ನಿಮ್ಮ ಮೈಗ್ರೇನ್‌ಗೆ ಚಿಕಿತ್ಸೆ ಪಡೆಯಲು ಇಲ್ಲಿಗೆ ಬಂದಿದ್ದೀರಿ, ಹೌದಾ? ಆದರೆ ನನ್ನನ್ನು ಕ್ಷಮಿಸಿ, ನಾನು ನಿಮಗೆ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ. ಕೇವಲ ನಿಮ್ಮ ಮೈಗ್ರೇನ್‌ಗೆ ಚಿಕಿತ್ಸೆ ನೀಡಲು ಈ ಜ್ಞಾನವನ್ನು ನಾನು ನಿಮಗೆ ನೀಡಲು ಸಾಧ್ಯವಿಲ್ಲ. ಅದಕ್ಕೆ ನೀವು ಡಾಕ್ಟರ್ ಹತ್ತಿರ ಹೋಗಬೇಕಾಗುತ್ತದೆ. ನಾನು ಯಾವುದನ್ನು ಬೋಧಿಸುತ್ತೇನೆಯೋ ಅದು ವಿಪಶ್ಯನ ಧ್ಯಾನ, ಅತ್ಯಂತ ಉನ್ನತವಾದ ಒಂದು ಆಧ್ಯಾತ್ಮಿಕ ಜ್ಞಾನ. ಅದು ನಿಮ್ಮ ದೇಶಕ್ಕೆ ಸೇರಿದ್ದು. ದೈಹಿಕ ಕಾಯಿಲೆಯನ್ನು ಗುಣಪಡಿಸುವ ಮಟ್ಟಕ್ಕೆ ಅದನ್ನು ಕೆಳಗಿಳಿಸಬಾರದು. ಆದ್ದರಿಂದ ಈ ಸಾಧನಾ ವಿಧಾನವನ್ನು ನಿಮಗೆ ಬೋಧಿಸಲು ಸಾಧ್ಯವಿಲ್ಲ" ಎಂದು ಹೇಳಿದರು.

ನಾನು ದಿಗ್ಭ್ರಾಂತನಾದೆ. ನಾನು ಹೆಸರಾಂತ ಭಾರತೀಯ ಕುಟುಂಬಕ್ಕೆ ಸೇರಿದವನು, ಯಶಸ್ವಿ ವ್ಯಾಪಾರಸ್ಥ ಮತ್ತು ಸಮಾಜ ಸೇವಕ ಎಂಬುದು ಅವರಿಗೆ ತಿಳಿದಿತ್ತು. ಬರ್ಮೀಯಾ ಸಮಾಜದಲ್ಲಿ ನಾನು ಗೌರವಾನ್ವಿತ ಸ್ಥಾನ ಹೊಂದಿದ್ದೆ ಮತ್ತು ಅನೇಕ ಬರ್ಮೀಯ ನಾಯಕರು ನನಗೆ ಚೆನ್ನಾಗಿ ಗೊತ್ತಿದ್ದರು. ಯಾವುದೇ ವ್ಯವಹಾರಸ್ಥ ಧಾರ್ಮಿಕ ಮುಖಂಡನು ನನ್ನಂತಹ ಶ್ರೀಮಂತ ಮತ್ತು ಹೆಸರುವಾಸಿಯಾದ ಶಿಷ್ಯನನ್ನು ಪಡೆಯಲು ಹೆಮ್ಮೆ ಪಡುತ್ತಿದ್ದರು. ಆದರೆ ಸಯಾಜಿಯವರು ಇವ್ಯಾವನ್ನೂ ಲೆಕ್ಕಿಸಿದೆ, ನನಗೆ ವಿಪಶ್ಯನ ಬೋಧಿಸಲು ಸಾಧ್ಯವಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು. ವಿಚಿತ್ರವೆಂದರೆ, ಈ ಮಾತುಗಳೇ ನನ್ನನ್ನು ಅವರೆಡೆಗೆ ಆಕರ್ಷಿಸಿದವು. ಪ್ರಭಾವಿತನಾಗದ, ನಿರ್ಲಿಪ್ತ, ಮತ್ತು ಪ್ರಾಪಂಚಿಕ ಆಕರ್ಷಣೆಗಳಿಂದ ಮುಕ್ತರಾದ ವ್ಯಕ್ತಿ ಅವರಾಗಿದ್ದರು.

ನಂತರ ಬಹಳ ತಾಳ್ಮೆಯಿಂದ ಮತ್ತು ಪ್ರೀತಿಯಿಂದ ಈ ಮುಂದಿನ ವಿವರಣೆಯನ್ನು ಕೊಟ್ಟರು: " ನೀವು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವುದಾದರೆ, ಸಕ್ಕರೆ ಉತ್ಪಾದನೆಗಾಗಿ ಮಾಡುತ್ತೀರಿ, ಕಾಕಂಬಿ (ಮಲ್ಯಾಸಿಸ್) ಗೋಸ್ಕರವಲ್ಲ, ಸರೀನಾ? ಖಂಡಿತವಾಗಿ ಕಾಕಂಬಿ ಬರುತ್ತದೆ, ಆದರೆ ಉಪ ಉತ್ಪನ್ನವಾಗಿ ಬರುತ್ತದೆ. ನಿಮ್ಮ ಗುರಿಯು ಸಕ್ಕರೆಯನ್ನು ಉತ್ಪಾದಿಸುವುದು, ಸರೀನಾ? ಅದೇ ತರಹ, ಹೆಚ್ಚು ಅಭಿವೃದ್ಧಿ ಹೊಂದಿದ ಈ ಜ್ಞಾನವನ್ನು ಆಧ್ಯಾತ್ಮಿಕ ಸಾಧನೆಗಾಗಿ ಉಪಯೋಗಿಸಿಕೊಂಡರೆ, ಮನಸ್ಸು ಶುದ್ಧಿಯಾಗುತ್ತದೆ. ಮತ್ತು ಮಲಿನತೆಗಳಿಂದ ಮುಕ್ತವಾದ ಮನಸ್ಸು ಸಹಜವಾಗಿಯೇ ಒತ್ತಡದಿಂದ ಮುಕ್ತವಾಗುತ್ತದೆ. ಅದರ ಫಲವಾಗಿ, ಮೈಗ್ರೇನ್ ಹೊರಟುಹೋಗಬಹುದು. ಈ ಫಲವು ಉಪಉತ್ಪನ್ನವಾಗಿ ತನ್ನಷ್ಟಕ್ಕೆ ತಾನೇ ಬರುತ್ತದೆ." ಇದು ಒಬ್ಬ ವ್ಯಾಪಾರಿಗೆ, ಒಬ್ಬ ವಾಣಿಜ್ಯೋದ್ಯಮಿಗೆ, ಕೊಡಬಹುದಾದ ಅತ್ಯುತ್ತಮ ಉಪಮೆಯಾಗಿತ್ತು. "ಆದ್ದರಿಂದ, ನಿಮ್ಮ ಮನಸ್ಸನ್ನು ಮಲಿನತೆಗಳಿಂದ ಮುಕ್ತಗೊಳಿಸಿಕೊಳ್ಳಬೇಕು ಎಂದು ನೀವು ತೀರ್ಮಾನಿಸಿದಾಗ, ಬಾಗಿಲುಗಳು ತೆರೆದಿರುವುದನ್ನು ನೀವು ಕಾಣುವಿರಿ. ಆದರೆ ನಿಮ್ಮ ಗುರಿಯು ಮೈಗ್ರೇನ್‌ನಿಂದ ನಿಮ್ಮನ್ನು ಮುಕ್ತಗೊಳಿಸಿಕೊಳ್ಳುವು ದಾದರೆ, ಬರಬೇಡಿ " ಎಂದು ಪ್ರೀತಿಯಿಂದ ಹೇಳಿದರು. ನಾನು ತಬ್ಬಿಬ್ಬಾದೆ. ಸಾಮಾನ್ಯ ಪ್ರಾಪಂಚಿಕ ಜ್ಞಾನಕ್ಕಿಂತ ಆಧ್ಯಾತ್ಮಿಕ ಜ್ಞಾನಕ್ಕೆ ಅವರು ಕೊಟ್ಟ ಪ್ರಾಮುಖ್ಯತೆ ನನಗೆ ಇಷ್ಟವಾಯಿತು. ಅವರ ಬಗೆಗೆ ನನ್ನಲ್ಲಿ ಅಗಾಧವಾದ ಗೌರವದ ಭಾವ ಮೂಡಿತು.

(ಗೋಯಂಕಾಜಿಯವರ ಆತ್ಮಕಥೆಯಿಂದ) .......ಮುಂದುವರಿಯುವುದು

**10 ದಿನದ ಶಿಬಿರ ಆಯೋಜಿಸುವವರು ಮತ್ತು ಮಕ್ಕಳಿಗೆ 70ನಿಮಿಷದ ಆನಾಪಾನಾ ಧ್ಯಾನ ಶಿಬಿರ ವ್ಯವಸ್ಥೆ ಮಾಡುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

## ಇತರೆ ಸ್ಥಳಗಳಲ್ಲಿ ಒಂದು ದಿನದ ಶಿಬಿರಗಳು

**ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 7829912733, 9060300558, 9980105309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ಭಾನುವಾರ ಹತ್ತು ದಿನದ ಶಿಬಿರ ನಡೆಯುವಾಗ ಬಿಟ್ಟು. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506, **ಲೋಕಾಪುರ(ಬಾಗಲಕೋಟೆ):** ಮೊದಲ ಅಥವಾ ಎರಡನೇ ಭಾನುವಾರ ಸಂಪರ್ಕಿಸಿ: 9741275657. **ಶಿವಮೊಗ್ಗ, ಸಂಪರ್ಕಿಸಿ** : 8453845690, 9480086856, 9449623606.

## ವಾರದ ಒಂದು ಗಂಟೆಯ ಸಾಮೂಹಿಕ ಧ್ಯಾನ ಶಿಬಿರಗಳ ಮಾಹಿತಿ

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm**

**ದಾವಣಗೆರೆ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6 ಸಂಪರ್ಕಿಸಿ: 9448588789, 9844245111, 9986962762. **ಬಳ್ಳಾರಿ:** ಪ್ರತಿ ಗುರುವಾರ ಸಾಯಂಕಾಲ 6 ರಿಂದ 7, ಸಂಪರ್ಕಿಸಿ: 9986677012, **ಬೀದರ್:** ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 10 ಸಂಪರ್ಕಿಸಿ: 9480240088, 9449556529, **ಧಾರವಾಡ:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9035032422, 9483483437, 7406934095, **ಬೆಳಗಾವಿ:** ಪ್ರತಿ ಭಾನುವಾರ ಬೆಳಿಗ್ಗೆ 7 ಇಂದ 8 ಸಂಪರ್ಕಿಸಿ: 9483285511, 9448591755, **ತೀರ್ಥಹಳ್ಳಿ:** ಪ್ರತಿ ಭಾನುವಾರ ಬೆಳಿಗ್ಗೆ 10.30 ರಿಂದ 11.30 ಸಂಪರ್ಕಿಸಿ: 9448814196, **ಮಂಗಳೂರು:** ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 9 ಸಂಪರ್ಕಿಸಿ: 9900736473. **ಶಿವಮೊಗ್ಗ:** ಪ್ರತಿ ಶನಿವಾರ ಸಾಯಂಕಾಲ 5 ರಿಂದ 6. ಸಂಪರ್ಕಿಸಿ: 8453845690, 9480086856, 9449623606.

**ಸೂಳ್ಯ** : ಪ್ರತಿ ಭಾನುವಾರ ಬೆಳಗ್ಗೆ 9.30 ರಿಂದ 10.30 ಸಂಪರ್ಕಿಸಿ : 9448215940.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ-2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

**ಮುದ್ರಿತ ವಿಷಯ** ತೆರೆದ-ಅಂಚೆ

**ಗೆ,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು-560070.